(ಇಂದು ದಿನಾಂಕಃ 07-12-2022 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀಸವಾಲು : ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ : -**

ಈ ದಾವೆಯ 1 ನೇ ಪ್ರತಿವಾದಿಯ ಗಂಡನ ಸಂಪೂರ್ಣ ಹೆಸರು ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ಸ್ವತ್ತಿನ ಸರ್ವೆ ಸಂಖ್ಯೆ 121 ಆಗಿರುತ್ತದೆ. ಅದರ ವಿಸ್ತೀರ್ಣ 01 ಎಕ್ರೆ 21 ಗುಂಟೆ ಇರುತ್ತದೆ. ಸದರಿ ಸ್ವತ್ತಿನ ಉತಾರ ನಾನು ನೋಡಿದ್ದೇನೆ. ಸಾಕ್ಷಿಗೆ ಈ ಹಂತದಲ್ಲಿ ನಿ ಪಿ 14 ತೋರಿಸಿ ಅದರ 9 ನೇ ಕಾಲಂನಲ್ಲಿ ಯಾರ ಹೆಸರು ಇದೆ ಎಂದು ಕೇಳಿದಾಗ ಸಾಕ್ಷಿ 1 ನೇ ಪ್ರತಿವಾದಿಯ ಹೆಸರು ಇದೆ ಎಂದು ಸದರಿ ದಾಖಲೆಯನ್ನು ಪರಿಶೀಲಿಸಿ ಉತ್ತರಿಸಿರುತ್ತಾರೆ. 1 ನೇ ಪ್ರತಿವಾದಿಗೆ ಸದರಿ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ ನಾವು ದಾವಾ ಸ್ವತ್ತಿನಲ್ಲಿ ಸ್ವಾದಿನ ಇರುವ ಬಗ್ಗೆ ಬರೆದು ದಾಖಲಿಸಿದ್ದೇವೆ. ದಾವಾ ಸ್ವತ್ತನ್ನು ನನ್ನ ತಂದೆ 60 ವರ್ಷಗಳ ಕಾಲ ಸ್ವಾದಿನ ಹೊಂದಿ ಆ ನಂತರ ಮೃತರಾಗಿರುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆನಂತರ ದಾವಾ ಸ್ವತ್ತನ್ನು ನನ್ನ ಸ್ವಾದಿನದಲ್ಲಿ ನಾನು ಇಟ್ಟುಕೊಂಡಿದ್ದೇನೆ. ನನ್ನ ತಂದೆ ದಾವಾ ಸ್ವತ್ತಿನ ಸ್ವಾದಿನದಲ್ಲಿ ಯಾವ ರೀತಿ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ಗಂಡನಾದ ಬಸವನ್ನೆಪ್ಪ ಬೇವಿನಕಟ್ಟಿ ಉರ್ಫ ಕಾವಿನಕಟ್ಟಿ ರವರು ಭೂ ನ್ಯಾಯಾ ಮಂಡಳಿ ನವಲಗುಂದದಲ್ಲಿ ಪಾರಂ-7 ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಭೂ ನ್ಯಾಯಾ ಮಂಡಳಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಮಂಜೂರು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಭೂ ನ್ಯಾಯಾ ಮಂಡಳಿಯ ಆದೇಶದ ವಿರುದ್ಧ ನಾನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದೇನೆ. ಸದರಿ ತಡೆಆಜ್ಞೆಯ ಪ್ರತಿಯನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿದ್ದೇನೆ. ಸಾಕ್ಷಿಗೆ ಈ ಹಂತದಲ್ಲಿ ನಿಶಾನೆ ಪಿ ಆಗಿ ಗುರುತು ಪಡಿಸಿದ ದಾಖಲೆಗಳನ್ನು ನೀಡಿ ಅದರಲ್ಲಿ ಸದರಿ ತಡೆಆಜ್ಞೆಯನ್ನು ತೋರಿಸುವಂತೆ ಕೇಳಿದಾಗ ಸಾಕ್ಷಿ ಎಲ್ಲಾ ದಾಖಲೆಗಳನು ಪರಿಶೀಲಿಸಿ ಅದರಲ್ಲಿ ಆ ದಾಖಲೆ ಇಲ್ಲಾ ಎಂದು ನುಡಿಯುತ್ತಾರೆ. ಅಲ್ಲದೇ ಸದರಿ ಆದೇಶವನ್ನು ತಮ್ಮ ವಕೀಲರಿಗೆ ನೀಡಿರುವುದಾಗಿ ನುಡಿಯುತ್ತಾರೆ.

1 ನೇ ಪ್ರತಿವಾದಿ ದಿನಾಂಕ 03-01-2007 ರ ಆದೇಶದ ಪ್ರಕಾರ ತನಗೆ ದಾವಾ ಸ್ವತ್ತು ಪುನರ ಮಂಜುರಾತಿ ಆದಾಗ ಕಟ್ಟಿದ ಶುಲ್ಕವನ್ನು ನಾನು ಪ್ರಶ್ನಿಸಿಲ್ಲ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಾನು ಧಾರವಾಡದ ಜಿಲ್ಲಾಧಿಕಾರಿ ಬಳಿ ಯಾವುದೇ ಅರ್ಜಿ ಸಲ್ಲಿಸಿಲ್ಲ. ನಾನು ಆ ರೀತಿ ಅರ್ಜಿಯನ್ನು ಸಲ್ಲಿಸಿ ದಾವಾ ಸ್ವತ್ತಿನಲ್ಲಿ ನನಗೆ ಹಕ್ಕು ಹಾಗೂ ಸ್ವಾದಿನ ಇಲ್ಲ ಎನ್ನುವ ಕಾರಣ ಸದರಿ ಅರ್ಜಿ ತಿರಸ್ಕರಿಸಲಾಗಿದೆ ಅಂದರೆ ಸರಿಯಲ್ಲ.

ದಾವಾ ಜಮೀನು ಕೃಷಿ ಭೂಮಿ ಆಗಿರುತ್ತದೆ ಎಂದರೆ ಸಾಕ್ಷಿ ಅದು ಜಮೀನು ಮತ್ತು ಮನೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ದಾವೆಯಲ್ಲಿ ಸಲ್ಲಿಸಿದ ವಾದ ಪತ್ರವನ್ನು ತೋರಿಸಿ ಅದರಲ್ಲಿ ಬರೆದ ವಿಷಯದ ಬಗ್ಗೆ ತಮಗೆ ಮಾಹಿತಿ ಇರುವ ಬಗ್ಗೆ ಕೇಳಿದಾಗ ಸಾಕ್ಷಿ ಅದರಲ್ಲಿ ಬರೆದ ವಿಷಯದ ಬಗ್ಗೆ ಮಾಹಿತಿ ಇರುವ ಬಗ್ಗೆ ಓಪ್ಪಿಕೊಳ್ಳುತ್ತಾರೆ. ಸಾಕ್ಷಿಗೆ ವಾದ ಪತ್ರದ 2 ನೇ ಕಂಡಿಕೆಯಲ್ಲಿ ದಾವಾ ಸ್ವತ್ತಿನ ಚಕ್ ಬಂದಿಯಲ್ಲಿ ದಕ್ಷಿಣ ದಿಕ್ಕಿಗೆ ವೈ ಹೆಚ್ ಮರಡ್ಡಿ ರವರು ಕಟ್ಟಿಸಿದ ಮನೆ ಎಂದು ಬರೆದಿರುವ ವಿಷಯ ಸರಿಯಾಗಿದೆಯೆ ಎಂದು ಕೇಳಿದಾಗ ಸಾಕ್ಷಿ ನಾವು ಜಮೀನು ಸರ್ವೆ ಸಂಖ್ಯೆ 121 ರಲ್ಲಿ ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ ಪಿ 18 ಮತ್ತು ನಿ ಪಿ 19 ರಲ್ಲಿ ಕಂಡು ಬರುವ ಮನೆ ಜಮೀನು ಸರ್ವೆ ಸಂಖ್ಯೆ 121 ರಲ್ಲಿ ಇರುವ ಬಗ್ಗೆ ಕೇಳಿದಾಗ ಸಾಕ್ಷಿ ಅದು ಜಮೀನು ಸರ್ವೆ ಸಂಖ್ಯೆ 121 ರಲ್ಲಿ ಇದೆ ಎಂದು ಓಪ್ಪಿಕೊಳ್ಳುತ್ತಾರೆ. ವೈ ಹೆಚ್ ಮರಡ್ಡಿ ರವರ ಪೂರ್ಣ ಹೆಸರು ಹೇಳುವಂತೆ ಕೇಳಿದಾಗ ಸಾಕ್ಷಿ ಯಲ್ಲಪ್ಪ ಹನುಮಪ್ಪ ಮರಡ್ಡಿ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

**(ಸಂತೋಷ ಎಂ. ಎಸ್.)**
ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.
ನವಲಗುಂದ.